ವೈಟ್ ಬಾಲ್‌ನಲ್ಲಿ ಆಡಲಷ್ಟೇ ಲಾಯಕ್ಕು ಎಂದು ಟೀಕೆಗೆ ಗುರಿಯಾಗಿದ್ದ ಸರ್ಫರಾಜ್ ಖಾನ್ ಮುಂಬೈ ತಂಡಕ್ಕೆ ಮರಳಿ ರಣಜಿ ಆಡುತ್ತಿದ್ದಾರೆ. ಸತತವಾಗಿ ಎರಡು ದೊಡ್ಡ ಮೊತ್ತದ ಇನಿಂಗ್ಸ್‌ಗಳನ್ನು ಕಟ್ಟಿದ ಅವರ ಕ್ರಿಕೆಟ್ ಪಯಣದಲ್ಲಿನ ಏಳುಬೀಳು ಸಿನಿಮೀಯವೂ ಹೌದು.




■ ವಿಶಾಖ ಎನ್.

# ದಿಗ್ಗನೆದ್ದ ದಿಟ್ಟ ಸರ್ಫರಾಜ್

ಒಂದಲ್ಲ, ಸತತವಾಗಿ ಎರಡು ಸಲ ದ್ವಿಶತಕದ ಗಡಿ ದಾಟಿದ ಆಟಗಾರನೆಂಬ ಶ್ರೇಯವನ್ನು ಮುಂಬೈ ತಂಡದ ಬ್ಯಾಟ್ಸ್‌ಮನ್ ಸರ್ಫರಾಜ್ ಖಾನ್ ಈ ಬಾರಿಯ ರಣಜಿ ಋತುವಿನಲ್ಲಿ ತಮ್ಮದಾಗಿಸಿಕೊಂಡರು. ಈ ದೇಸಿ ಕ್ರಿಕೆಟ್‌ನಲ್ಲಿ ದೊಡ್ಡ ಮೊತ್ತವನ್ನು ದಾಖಲಿಸುವವರ ಪರಂಪರೆಯೇ ಇದೆ. ಆದರೆ, ಬಾಲಂಗೋಚಿ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿಕೊಂಡು ಇಷ್ಟು ದೊಡ್ಡ ಇನಿಂಗ್ಸ್ ಕಟ್ಟುವವರು ವಿರಳ. ಒಂದು ಕಡೆ ಗೆಲ್ಲಲೇಬೇಕೆಂಬ ಅಥವಾ ಮೊದಲ ಇನಿಂಗ್ಸ್ ಲೀಡ್ ತೆಗೆದುಕೊಳ್ಳಬೇಕೆಂಬ ಒತ್ತಡದ ಭಾರ. ಇನ್ನೊಂದು ಕಡೆ ಬಾಲಂಗೋಚಿ ಬ್ಯಾಟ್ಸ್‌ಮನ್‌ಗಳ ಬೀಸಾಟವನ್ನು ನಿಯಂತ್ರಿಸಿಕೊಂಡೇ, ಹೆಚ್ಚು ಸ್ಟ್ರೈಕ್ ತೆಗೆದುಕೊಂಡು ಆಡಬೇಕಾದ ಶಾಣ್ಯಾತನ. ಇವೆರಡನ್ನೂ ಅಳವಡಿಸಿಕೊಂಡು ಆಯಾ ಪಂದ್ಯದ ಮಟ್ಟಿಗೆ ‘ಹೀರೊ’ ಆಗುವುದು ವಿಶೇಷ ಸಾಧನೆಯೇ ಹೌದು. ಸರ್ಫರಾಜ್ ಖಾನ್ ಇಂಥ ಸವಾಲಿಗೆ ಸತತ ಎರಡು ಪಂದ್ಯಗಳಲ್ಲಿ ಎದೆಗೊಟ್ಟಿರುವುದು ಗಮನಾರ್ಹ.

ಉತ್ತರ ಪ್ರದೇಶದ ವಿರುದ್ಧ ನಡೆದ ಪಂದ್ಯದಲ್ಲಿ ಅವರು ತ್ರಿಶತಕ ವೀರ ಎನಿಸಿಕೊಂಡರು. ಹಿಮಾಚಲ ಪ್ರದೇಶದ ಎದುರಿನ ಪಂದ್ಯದಲ್ಲಿ ದ್ವಿಶತಕದಾಟದ ಸೊಬಗು ತೋರಿದರು. ಎರಡೂ ಇನಿಂಗ್ಸ್‌ಗಳಲ್ಲಿ ಅವರು ಔಟಾಗದೇ